ಕಮಿಟಿಯವರ ಮುಂದೆಯೂ ಕೂಡ ಹೋಗಿತ್ತು. ಆದರೆ ಅವರು ಕ್ರಮ ತೆಗೆದುಕೊಂಡಿಲ್ಲ. ಈಗ ನಾಲ್ಕನೇ ವೇತನಾ ಆಯೋಗಕ್ಕೆ ಮುಂದೆ ರೆಫರ್ ಮಾಡಿದ್ದೇವೆ. ಅದನ್ನು ಕಾದು ನೋಡೋಣ.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ:– ಸಂಬಳವಾದರೂ ಜಾಸ್ತಿ ಮಾಡಿ.

ಶ್ರೀ ಎಂ.ವೈ. ಘೋರ್ಪಡೆ:– ನಾಲ್ಕನೇ ವೇತನಾ ಆಯೋಗದ ಅಭಿಪ್ರಾಯ ಬರುವವರೆಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ:– ಇವರು 10 ಸಾವಿರ ಜನ ಇದ್ದಾರೆಂದು ಹೇಳಿದ್ದೀರಿ. ಇವರಲ್ಲಿ ಎಸ್.ಸಿ. ಎಸ್.ಟಿ. ಜನ ಎಷ್ಟು ಇದ್ದಾರೆ ಮತ್ತು ಇದಕ್ಕೆ ಅಪಾಯಿಂಟಿಂಗ್ ಅಥಾರಿಟಿ ಯಾರು ?

ಶ್ರೀ ಎಂ.ವೈ. ಘೋರ್ಪಡೆ:– ಈ ಬ್ರೇಕ್‌ಅಪ್ ಫಿಗರ್ಸ್ ನನ್ನ ಹತ್ತಿರ ಇಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಹಿಂದೆ ಹಣಕಾಸಿನ ಮಂತ್ರಿಯಾಗಿದ್ದವರು ಈಗ ಕಂದಾಯ ಮಂತ್ರಿಗಳಾಗಿದ್ದಾರೆ. ಈಗ 18 ಕೋಟಿ ಬೇಕಾಗುತ್ತದೆ ಎಂದು ಹೇಳಿದರು. ಈಗ ಕೊಡುತ್ತಿರುವುದು 7 1/2 ಕೋಟಿ ಎಂದು ಹೇಳಿದ್ದಾರೆ. ನಾನು ಗುಣಾಕಾರ ಮಾಡಿದೆ. 10450 x 12 x 600 ಮಾಡಿದರೆ ಆದು 7.524 ಕೋಟಿ ಬರುತ್ತದೆ. 7 ಕೋಟಿ ರೂಪಾಯಿ ಸಂಬಳ ಕೊಟ್ಟು, ಈಗ ನಮಗೆ 75 ಕೋಟಿ ಕಿರುಕುಳ ಕೊಡುತ್ತಿದ್ದೀರಿ. ಆ ಕಾರಣ ನನ್ನ ಸಲಹೆ, ಈಗ ಕಂಪ್ಯೂಟರೈಸ್ ಮಾಡುತ್ತೇವೆ, ಪಟ್ಟಾ ಪುಸ್ತಕ ಕೊಡುತ್ತೇವೆ ಎಂದು ಹೇಳುತ್ತಾರೆ. ನಮ್ಮಲ್ಲಿ ಕಂದಾಯ ವಸೂಲಾತಿಯಲ್ಲಿ ನಿಮ್ಮ ಅಪೇಕ್ಷೆ ಎಷ್ಟು ಇದೆ ಅದರಲ್ಲಿ ಅರ್ಧಭಾಗ ಕೂಡ ವಸೂಲಾತಿ ಆಗುತ್ತಿಲ್ಲ. ಕಂದಾಯ ವಸೂಲಿಗಿಂತ ಈ ಗ್ರಾಮ ಸಹಾಯಕರ ಸಂಬಳ ಜಾಸ್ತಿಯಾಗುತ್ತದೆ. ಗ್ರಾಮಲೆಕ್ಕಿಗಳು ಶನಿಗಳಾದರೆ ಇವರು ಉಪಶನಿಗಳು. ನನ್ನ ಸಲಹೆ ಎಂದರೆ ಶನಿಯೂ ಬೇಡ, ಉಪಶನಿಯೂ ಬೇಡ.

ಇದರಿಂದ ನಿಮಗೆ ಏಳೂವರೆ ಕೋಟಿ ಉಳಿತಾಯವಾಗುತ್ತದೆ. ಆದಷ್ಟು ಬೇಗ ನೀವು ಪಟ್ಟಾಪುಸ್ತಕ ಕೊಟ್ಟರೆ, ಇದರಿಂದಲೂ ಉಳಿತಾಯ ಮಾಡಬಹುದೆಂದು ನನ್ನ ಸಲಹೆ.

ಶ್ರೀ ಎಂ. ರಾಜಶೇಖರಮೂರ್ತಿ:– ಅವರ ಸಲಹೆ ಬೇರೆ ರೂಪದಲ್ಲಿರಬೇಕಾಗಿತ್ತು. ಅಂದರೆ, ಕಂದಾಯ ಬೇಡ, ಗ್ರಾಮ ಸಹಾಯಕರು ಬೇಡವೆಂದು, that would have been a better suggestion.

ಪೀಣ್ಯ ದಾಸರಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರಿನ ಅಭಾವ

(2148): ಶ್ರೀ ಎಸ್. ರಮೇಶ್ (ಉತ್ತರಹಳ್ಳಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಪೀಣ್ಯ ದಾಸರಹಳ್ಳಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

2. ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

1. ಬಂದಿದೆ.

2. ಅ) ಪೀಣ್ಯ:

ತ್ವರಿತ ಗ್ರಾಮೀಣ ನೀರು ಸರಬರಾಜು ಯೋಜನೆ ಪೂರ್ಣಗೊಳ್ಳುವ ಹಂತದಲ್ಲಿದೆ.

ಆ. ದಾಸರಹಳ್ಳಿ:

ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ 1992-93ರ ಅನುಬಂಧ 'ಇ' ನಲ್ಲಿ ಸೇರಿದೆ.

ಶ್ರೀ ಎಸ್. ರಮೇಶ್:- ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಪೀಣ್ಯ, ದಾಸರಹಳ್ಳಿಯಲ್ಲಿ ಕುಡಿಯುವ ನೀರಿನ ತೊಂದರೆ ಇದೆ, ಅದಕ್ಕೋಸ್ಕರ ಕೆಲವು ಖಾಯಂ ಯೋಜನೆಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಈ ಕೆಲಸ ಸುಮಾರು ವರ್ಷಗಳಿಂದ ನಡೆಯುತ್ತಿದೆ. ನಾನು, ಸಂಬಂಧಪಟ್ಟ ಇಂಜಿನಿಯರ್‌ರವರಿಗೆ ಫೋನ್ ಮಾಡಿ, ಒಂದು ವಾರದಿಂದ ಪ್ರಯತ್ನ ಮಾಡುತ್ತಿದ್ದೇನೆ. ಆ ಎಕ್ಸಿಕ್ಯುಟಿವ್ ಇಂಜಿನಿಯರ್ ಆಫೀಸಿನಲ್ಲಿಯೇ ಇರುವುದಿಲ್ಲ. ಅವರು ಆಫೀಸಿನಲ್ಲಿದ್ದು, ಏನಾದರೂ ಮೆಸೇಜ್ ತೆಗೆದುಕೊಳ್ಳುತ್ತಾರೆಯೋ ಇಲ್ಲವೋ, ಗೊತ್ತಿಲ್ಲ. ಇವತ್ತು, ನಾವು ಯಾರನ್ನು ಕೇಳಬೇಕೆನ್ನುವುದೇ ದೊಡ್ಡ ಸಮಸ್ಯೆಯಾಗಿದೆ. ಇವು ಸುಮಾರು ಒಂದೂವರೆ, ಎರಡು ಲಕ್ಷ ಜನಸಂಖ್ಯೆ ಇರತಕ್ಕ ದೊಡ್ಡ ಗ್ರಾಮಗಳು. ಈ ಗ್ರಾಮಗಳು ತಮಗೂ ಗೊತ್ತಿದೆ. ತಾವು ಹೋಗತಕ್ಕ ದಾರಿಯಲ್ಲಿಯೇ, ಪೀಣ್ಯ ಮತ್ತು ದಾಸರಹಳ್ಳಿ ಎಂಬ ಎರಡು ಊರುಗಳು ಬರುತ್ತವೆ. ಈ ಗ್ರಾಮಗಳು ಬೆಂಗಳೂರಿಗೆ ಹತ್ತಿರದಲ್ಲಿಯೇ ಇವೆ. ಆದರೂ, ಪ್ರತಿ ವರ್ಷ ಕುಡಿಯುವ ನೀರಿಗೆ ತೊಂದರೆ ಇದೆ. ನಾನು, ಈಗಾಗಲೇ ಎರಡು ಮೂರು ಸಾರಿ ಕೇಳಿಕೊಂಡು ಬಂದಿದ್ದೇನೆ. ಒಂದುಸಾರಿ ಕೆಲಸ ಶುರು ಮಾಡುತ್ತಾರೆ, 6 ತಿಂಗಳು ಗುದ್ದಲಿಪೂಜೆ ಮಾಡುತ್ತಾರೆ, ಇದಾದ ತಕ್ಷಣ ಇನ್ನೇನೋ ಮಾಡುತ್ತಾರೆ. ಇದನ್ನು ಯಾವಾಗ ಮುಗಿಸುತ್ತಾರೆ, ಎಷ್ಟು ಹಣ ಕೊಟ್ಟಿದ್ದಾರೆ, ಅಥವಾ ಕೊಡುತ್ತಾರೆಂದು ಹೇಳುತ್ತಾರೆಯೇ ? ಇದನ್ನಾದರೂ ಸಂಬಂಧಪಟ್ಟ ಸಚಿವರನ್ನು ಕೇಳಿ ಎಂದು ಹೇಳೋಣವೆಂದರೆ, ಆ ಅಧಿಕಾರಿಗಳು ಪತ್ತೆ ಇರುವುದಿಲ್ಲ, ಒಂದು ವಾರದಿಂದ ಪ್ರಯತ್ನ ಮಾಡುತ್ತಿದ್ದೇನೆ. ಆ ಊರಿನ ಜನಕ್ಕೆ ಕುಡಿಯುವ ನೀರು ಇಲ್ಲ, ಕೂಡಲೇ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳು ಯಾರೇ ಇರಲಿ, ಇದಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ, ಯಾವಾಗ ಪ್ರಾರಂಭವಾಗಿದೆ, ಯಾವಾಗ ಮುಗಿಯುತ್ತದೆ ಎಂದು ಒಬ್ಬ ಶಾಸಕರು ಫೋನ್ ಮಾಡಿ ಕೇಳಿದಾಗ, ಸೌಜನ್ಯದಿಂದ ಉತ್ತರವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಂದು ನಂಬಿದ್ದೇನೆ. ಅಲ್ಲಿ ಕುಡಿಯುವ ನೀರಿನ ಅಭಾವ ಇದೆ, ಇದನ್ನು ಯಾವ ರೀತಿ ಪರಿಹಾರ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಂ.ವೈ. ಘೋರ್ಪಡೆ:- ಸನ್ಮಾನ್ಯ ಅಧ್ಯಕ್ಷರೇ, ಇದು ಯಶವಂತಪುರ ಹೋಬಳಿಯಲ್ಲಿ ಎರಡು ಹಳ್ಳಿಗಳಿಗೆ ಸಂಬಂಧಪಟ್ಟ ಪ್ರಶ್ನೆ. ಒಂದು ಹಳ್ಳಿ ಪೀಣ್ಯ, ಇಲ್ಲಿ ಸುಮಾರು 8,973 ಜನಸಂಖ್ಯೆ ಇದೆ. ಮತ್ತೆ ನನಗೆ ಇರುವ ಮಾಹಿತಿ ಪ್ರಕಾರ, ತಲಾ ನೀರಿನ ಪ್ರಮಾಣ 23 ಲೀಟರ್ ಪರ್ ಹೆಡ್, ಪರ್ ಡೇ ಸಿಗುತ್ತಾ ಇದೆ. ಅಲ್ಲಿ 9 ಬೋರ್‌ವೆಲ್ಸ್ ಇವೆ. ಹಾಗೆಂದತಕ್ಷಣ ಮಾನ್ಯ ಸದಸ್ಯರು ಹೇಳಿದ ಪ್ರಶ್ನೆಗೆ ನಿರ್ಲಕ್ಷ್ಯ ಮಾಡಬೇಕೆಂದಿಲ್ಲ. ಮತ್ತು ನಿರ್ಲಕ್ಷ್ಯ ಮಾಡತಕ್ಕ ಉದ್ದೇಶವೂ ಕೂಡ ಇಲ್ಲ. ಈಗ ಅವರ ಮನಸ್ಸಿನಲ್ಲಿರತಕ್ಕ ಸ್ಕೀಮ್ ಏನಿದೆ, ಅದಕ್ಕೆ 2 ಲಕ್ಷದ 90 ಸಾವಿರ ಈಗಾಗಲೇ ಬುಕ್ ಆಗಿದೆ. ಪೀಣ್ಯ ಹಳ್ಳಿಯಲ್ಲಿ, ಮಾರ್ಚ್ ತಿಂಗಳಲ್ಲಿ ಇದನ್ನು ಪೂರೈಸುತ್ತೇವೆ. ಇನ್ನು ದಾಸರಹಳ್ಳಿಯಲ್ಲಿಯೂ ಕೂಡ 10 ಸಾವಿರ ಜನಸಂಖ್ಯೆ ಇದೆ. ಮತ್ತೆ 21.55 ಲೀಟರ್ ಪರ್ ಡೇ ತಲಾ ಪ್ರಮಾಣ ನೀರು ಸಿಕ್ಕುತ್ತಾ ಇದೆ. ಆದರೂ ಕೂಡ ಅಲ್ಲಿ ಪೈಪ್ ವಾಟರ್ ಸ್ಕೀಮ್ ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೆ 10 ಲಕ್ಷ 50 ಸಾವಿರ ಎಸ್ಟಿಮೇಟ್ ಆಗಿದೆ. ಹೋದ ವರ್ಷದ ಬಜೆಟ್‌ನಲ್ಲಿ 75 ಸಾವಿರ ಮಾತ್ರ ಸೇರಿಸಲಾಗಿದೆ. ಇದಕ್ಕೆ

ಸಾಕಷ್ಟು ನೀರಿನ ಸೋರ್ಸ್ ಇದೆ. ಆದಕಾರಣ, ಪೈಪ್ ವಾಟರ್ ಸ್ಕೀಮ್ ಆದಷ್ಟು ಬೇಗ ಪೂರ್ತಿ ಮಾಡಿಕೊಡುತ್ತೇವೆ.

ಶ್ರೀ ಎಸ್. ರಮೇಶ್:– ಪೀಣ್ಯ ಗ್ರಾಮದಲ್ಲಿ 8 ಸಾವಿರ ಜನಸಂಖ್ಯೆ ಎಂದು ಮಾನ್ಯ ಸಚಿವರು ಹೇಳಿದ್ದನ್ನು ಒಪ್ಪುತ್ತೇನೆ. ಆದರೆ, ಇದು ಓಬೀರಾಯನ ಕಾಲದಲ್ಲಿ ಮಾಡಿರತಕ್ಕ ಸರ್ವೆ. ಇವತ್ತು ಪೀಣ್ಯ, ದಾಸರಹಳ್ಳಿ ಸುತ್ತಮುತ್ತ, ಬಿ.ಇ.ಎಲ್. ಹೆಚ್.ಎಂ.ಟಿ. ಇತ್ಯಾದಿ ಕೈಗಾರಿಕೆಗಳು ಬಂದಿದ್ದು, ಈ ಗ್ರಾಮಗಳು ಮಧ್ಯೆ ಸೇರಿವೆ. ಇವತ್ತಿನ ಜನಸಂಖ್ಯೆ ಸುಮಾರು ಎರಡೂವರೆ ಲಕ್ಷದಿಂದ ಮೂರು ಲಕ್ಷ ಇದೆ. ತಾವೇ ಹೇಳುತ್ತಿದ್ದೀರಿ, 10 ಲಕ್ಷ ಎಸ್ಟಿಮೇಟ್ ಆಗಿದ್ದು, 75 ಸಾವಿರ ಮಾತ್ರ ಬಿಡುಗಡೆ ಮಾಡಿದ್ದೇವೆಂದು. ಈ ಹಣದಲ್ಲಿ ಆ ಕೆಲಸವಾಗುತ್ತದೆಯೇ ? 10 ಲಕ್ಷ ಎಸ್ಟಿಮೇಟಿಗೆ 75 ಸಾವಿರ ಬಿಡುಗಡೆ ಮಾಡಿದರೆ, ಈ ಕೆಲಸ ಯಾವಾಗ ಪೂರ್ಣವಾಗುತ್ತದೆ. ಆದ್ಯತೆ ಮೇಲೆ ಇಂತಹ ಕೆಲಸಗಳನ್ನು ಮಾಡುವುದಕ್ಕೆ ಹಣಕಾಸನ್ನು ಬಿಡುಗಡೆ ಮಾಡಬೇಕು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ ಈ ಅಂಕಿ ಅಂಶಗಳನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಜನಸಂಖ್ಯೆ ಎಷ್ಟು, ತಲಾ ಪ್ರಮಾಣ ಎಷ್ಟು, ಹೊಸ ಬೋರ್‌ವೆಲ್ಸ್ ಎಷ್ಟು ಬೇಕು, ಏನು ಕೆಲಸ ಮಾಡಿದ್ದಾರೆ ಇನ್ನು ಹೊಸದಾಗಿ ಮಿನಿ ಪೈಪ್ಡ್ ವಾಟರ್ ಸಪ್ಲೈಗೆ ಏನು ಮಾಡಬೇಕು ಈ ಬಗ್ಗೆ ಮಾನ್ಯ ಸದಸ್ಯರು ಪುನಃ ಈ ಹಳ್ಳಿಗಳಿಗೆ ಹೋಗಿ ಏನಾದರೂ ಜನಸಂಖ್ಯೆಯಲ್ಲಿ ಬದಲಾವಣೆ ಆಗಿದೆಯೇ ಪರಿಸ್ಥಿತಿಯಲ್ಲಿ ಬದಲಾವಣೆ ಆಗಿದೆಯೇ ಇದನ್ನು ಗಮನದಲ್ಲಿಟ್ಟುಕೊಂಡು ಬಂದು ಏನಾದರೂ ಮಾಡಬೇಕೆಂದರೆ ಮಾಡೋಣ. I will send our engineers to visit these two villages and reexamine the adequacy of water.

ಶ್ರೀ ಎಸ್. ರಮೇಶ್:– ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಏನು ಮಾಡುತ್ತೀರಿ ?

ಶ್ರೀ ಎಂ.ವೈ. ಘೋರ್ಪಡೆ:– ತೊಂದರೆ ಇದೆ. 23 ಲೀಟರ್ 20 ಲೀಟರ್ ತಲಾ ಪ್ರಮಾಣ ಸಿಗುತ್ತಿದೆ ಎಂದು ನನಗೆ ವರದಿ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಎಷ್ಟೋ ಕಡೆ 5 ಲೀಟರ್ ನೀರು ಸಹ ಸಿಗುತ್ತಿಲ್ಲ. ತಲಾ ಪ್ರಮಾಣ ಇಲ್ಲ. ತೀವ್ರವಾದ ಅಭಾವ ಕುಡಿಯುವ ನೀರಿಗೆ ಇದ್ದರೆ ಈ ಅಂಕಿ ಅಂಶಗಳ ಆಧಾರದ ಮೇಲೆ ಒಪ್ಪುವುದು ಬಹಳ ಕಷ್ಟವಾಗುತ್ತದೆ. ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್ ಮಾಡಿ ಏನು ಪೂರೈಸುತ್ತಿದ್ದೇವೆ ಅದು ಬಿಟ್ಟು ಇನ್ನೂ ಏನಾದರೂ ಮಾಡಬೇಕೆ ? ಈಗ ನಾವು ಅಲ್ಲಿ ಎರಡು ಸ್ಕೀಮ್ ಪೂರೈಸಿದ್ದೇವೆ. ಅದು ಬಿಟ್ಟು ಇನ್ನೂ ಏನಾದರೂ ಮಾಡಬೇಕೋ ಬೋರ್‌ವೆಲ್ಸ್ ಹಾಕಿಸಬೇಕೋ ತಮ್ಮ ಅಭಿಪ್ರಾಯ ಏನಿದೆ ನಾನು ಇಂಜಿನೀಯರ್ಸ್ ಕಳುಹಿಸುತ್ತೇನೆ ಮತ್ತು ಏನು ಪುನರಾಲೋಚನೆ ಮಾಡಬೇಕು ಎಂದು ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟರೆ ಅದನ್ನು ನಾನು ಮಾಡುವುದಕ್ಕಾಗುತ್ತದೆ. It is not a matter of acute drinking water scarcity, Suitable augmentation maybe wanting. I will have it examined.

ಶ್ರೀ ಎಸ್. ರಮೇಶ್:– ಕುಡಿಯುವ ನೀರು ಇಲ್ಲದೆ ನಾನು ಕ್ಷೇತ್ರಕ್ಕೆ ಹೋದಾಗ ಜನ ಕಾರು ಅಡ್ಡಗಟ್ಟಿ ಕೇಳುತ್ತಾರೆ ನಮಗೆ ಬಹಳ ಕಷ್ಟವಾಗಿದೆ.

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ.

ಪ್ರಶ್ನೆ ಸಂಖ್ಯೆ:– 428ನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಇಳ್ಕಲ್ ವಿಜಯಕುಮಾರ್:– ಮಾನ್ಯ ಅಧ್ಯಕ್ಷರೇ ಇದನ್ನು ಜಿಲ್ಲಾ ಪರಿಷತ್ತಿನವರೇ ಅಭಿವೃದ್ಧಿ ಮಾಡುವುದು. ಅದಕ್ಕೆ ನಾನು ಅವರಿಗೆ ಪ್ರಶ್ನೆ ಕೇಳಿದೆ.

ಅಧ್ಯಕ್ಷರು:– ನಾನು ತರಿಸಿ ನೋಡುತ್ತೇನೆ. ನನಗೆ ಉತ್ತರ ಕಳುಹಿಸಿಕೊಟ್ಟಿಲ್ಲ.

ಬೆಂಗಳೂರು ಡೈರಿಯಲ್ಲಿ ಸಾರ್ವಜನಿಕ ಕುಂದುಕೊರತೆ ವಿಭಾಗ

(1839): ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):– ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರವು ಬೆಂಗಳೂರು ಡೇರಿಯಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಸೆಲ್ ಸೃಷ್ಟಿಸಿದೆಯೆ;

ಆ. ಹಾಗಾದರೆ, ಸಾರ್ವಜನಿಕರಿಗೆ ಇದನ್ನು ತಿಳಿಸಲಾಗಿದೆಯೇ;

ಇ. ಸಾರ್ವಜನಿಕರ ಕುಂದುಕೊರತೆ ಸೆಲ್ ಸೃಷ್ಟಿಸಿಲ್ಲವಾದರೆ ಸರ್ಕಾರವು ಸೆಲ್ ತೆರೆಯಲು ತುರ್ತು ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ. ಹೌದು

ಆ. ಹೌದು

ಇ. ಉದ್ಭವಿಸುವುದಿಲ್ಲ.

ಶ್ರೀ ಆರ್. ದಯಾನಂದರಾವ್:– ಮಾನ್ಯ ಅಧ್ಯಕ್ಷರೇ, ಉತ್ತರ ಕೊಟ್ಟಿದೆ. ನಾನು ಪ್ರಶ್ನೆ ಕೇಳಿದ್ದುದು ಬೆಂಗಳೂರು ಡೈರಿಯಲ್ಲಿ ಸಾರ್ವಜನಿಕ ಕುಂದುಕೊರತೆಗಳ ವಿಭಾಗವನ್ನು ಸರ್ಕಾರ ಸ್ಥಾಪಿಸಿದ್ದಾರೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಇದು ಯಾವಾಗ ಜಾರಿಗೆ ಬಂತು ? ಇದನ್ನು ಹೊಸದಾಗಿ ಮಾಡಿದ್ದೀರಾ ? ಇದು ಹಿಂದಿನ ಮಂತ್ರಿಗಳ ಕಾಲದಲ್ಲಿ ಆಗಿತ್ತೋ ಅಥವಾ ತಾವು ಬಂದ ಮೇಲೆ ಮಾಡಿದ್ದೋ ಎಂದು ನಾನು ಕೇಳುತ್ತೇನೆ. ಮತ್ತೆ ನನ್ನ ಎರಡನೇ ಪ್ರಶ್ನೆ ಅದರ ಬಗ್ಗೆ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರ ಸ್ಟೇಟ್‌ಮೆಂಟ್ ನಾವು ಪತ್ರಿಕೆಗಳಲ್ಲಿ ಓದಿಲ್ಲ. ಮತ್ತು ಇದರ ಬಗ್ಗೆ ಏನಾದರೂ ಎಂ.ಎಲ್.ಎ.ಗಳನ್ನು ಕರೆಯಿಸಿ ಪೂರ್ಣವಾಗಿ ಚರ್ಚೆ ಮಾಡಿ ಏನು ಭ್ರಷ್ಟಾಚಾರ ಡೈರಿಯಲ್ಲಿ ನಡೆಯುತ್ತಿದೆ ಅದನ್ನು ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೇ, ಬೆಂಗಳೂರು ಡೈರಿಯಲ್ಲಿ ಈ ಸಾರ್ವಜನಿಕರ ಕುಂದುಕೊರತೆಗಳ ವಿಭಾಗ ದಿನಾಂಕ 3–2–93ರಲ್ಲಿ ಬಂತು. ದಿನಾಂಕ 3–2–93ರಲ್ಲಿ ಬರೀ ಬೆಂಗಳೂರು ಡೈರಿ ಅಲ್ಲದೆ ರಾಜ್ಯದಲ್ಲಿರತಕ್ಕಂಥಾ ಎಲ್ಲಾ ಡೈರಿಗಳಲ್ಲಿ ಕುಂದುಕೊರತೆಗಳ ವಿಭಾಗ ನಾವು ಪ್ರಾರಂಭ ಮಾಡಿದ್ದೇವೆ. ಎರಡನೆಯದಾಗಿ ಪತ್ರಿಕೆಗಳಲ್ಲಿ ಬಂದಿದೆಯೇ ಎಂದು ಕೇಳಿದರು. ದಿನಾಂಕ 6–2–93 ರಂದು ಪ್ರಜಾವಾಣಿ ಪತ್ರಿಕೆಯಲ್ಲಿ, ದಿನಾಂಕ 5–2–93ರಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಮತ್ತು ದಿನಾಂಕ 7–2–93ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಬಂದಿದೆ. ಮತ್ತು ಕಳೆದ ತಿಂಗಳಲ್ಲಿ ಶಾಸಕರನ್ನು ಮತ್ತು ಬೆಂಗಳೂರು ಡೈರಿಯಲ್ಲಿರತಕ್ಕಂಥ ಮತ್ತು ಇತರೆ ಕಡೆಗಳಲ್ಲಿ ಇರತಕ್ಕಂಥ ಕುಂದುಕೊರತೆಗಳ ಅಧಿಕಾರಿಗಳನ್ನು ಕರೆದು ವಿಧಾನ ಸೌಧದಲ್ಲಿ ಸಭೆಯನ್ನು ಮಾಡಲಾಗಿದೆ. ಮತ್ತೊಂದು ಪ್ರಶ್ನೆಗೆ ಅವರು ಭ್ರಷ್ಟಾಚಾರದ ಬಗ್ಗೆ ಶಾಸಕರನ್ನು ಕರೆದು ಮಾತನಾಡಿ ಎಂದು ಹೇಳಿದ್ದಾರೆ. ಈಗಾಗಲೇ ನಾವು ಕುಂದುಕೊರತೆಗಳ ವಿಭಾಗ ಮಾಡಿದ್ದು ಅಲ್ಲಿಗೆ ಲೀಕೇಜ್